**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್.ನವೀನ್ ಇವರ ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:-**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳಿಗೆ ಲಕ್ಷಾಂತರ ವಿದ್ಯಾರ್ಥಿಗಳು ಪ್ರವೇಶಾತಿ ಬಯಸಿ ಅರ್ಜಿ ಸಲ್ಲಿಸಿದ್ದು, ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರಕದ ಕಾರಣ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿರುವುದು ಶೋಚನಿಯವಾಗಿದೆ. ಪ್ರಸ್ತುತ ವಸತಿ ನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ ಮತ್ತು ಸದರಿ ಇರುವ ವಸತಿ ನಿಲಯಗಳ ಮೌಲ್ಯ ಸೌಕರ್ಯಗಳ ಬಗ್ಗೆ ಮಾಹಿತಿ ನೀಡುವ ಕುರಿತು.

**ಉತ್ತರ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 1245 ಮೆಟ್ರಿಕ್ ಪೂರ್ವ ಹಾಗೂ 1414 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 2659 ಸರ್ಕಾರಿ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 250641 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ವಿವರ | ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ | | |
|---|---|---|---|---|---|---|---|
| | | **ಬಾಲಕರು** | **ಬಾಲಕಿಯರು** | **ಒಟ್ಟು** | **ಬಾಲಕರು** | **ಬಾಲಕಿಯರು** | **ಒಟ್ಟು** |
| 1 | ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು | 965 | 280 | 1245 | 51792 | 15511 | 67303 |
| 2 | ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು | 665 | 749 | 1414 | 85764 | 97574 | 183338 |
| | **ಒಟ್ಟು** | **1630** | **1029** | **2659** | **137556** | **113085** | **250641** |

ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ SHP ತಂತ್ರಾಂಶದ ಮುಖಾಂತರ ಆನ್-ಲೈನ್ ಅರ್ಜಿ ಆಹ್ವಾನಿಸಿ ನಂತರ ತಾಲ್ಲೂಕು ಮಟ್ಟದಲ್ಲಿ ಮಾನ್ಯ ಶಾಸಕರ ಅದ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯ ಮೂಲಕ ವಿದ್ಯಾರ್ಥಿಗಳ ಅಂಕಗಳು ಮತ್ತು ಮೀಸಲಾತಿಯನುಸಾರ ಲಭ್ಯವಿರುವ ಖಾಲಿ ಸ್ಥಾನಗಳಿಗೆ ಅನುಗುಣವಾಗಿ ಆಯ್ಕೆ ಪಟ್ಟಿ ಸಿದ್ದಪಡಿಸಿಕೊಂಡು ಪ್ರವೇಶಾತಿಯನ್ನು ಕಲ್ಪಿಸಲಾಗುತ್ತದೆ.

2025-26ನೇ ಶೈಕ್ಷಣಿಕ ಸಾಲಿನಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ 134817 ನವೀಕರಣ ವಿದ್ಯಾರ್ಥಿಗಳಿದ್ದು, 115824 ಖಾಲಿ ಸ್ಥಾನಗಳಿಗನುಗುಣವಾಗಿ 241682 ಅರ್ಜಿಗಳು ಸ್ವೀಕೃತವಾಗಿದ್ದು, 99909 ವಿದ್ಯಾರ್ಥಿಗಳಿಗೆ ಪ್ರವೇಶವಾಕಾಶವನ್ನು ಕಲ್ಪಿಸಿದ್ದು, 1,41,773 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

..2

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವಿದ್ಯಾರ್ಥಿನಿಲಯಗಳಲ್ಲಿ ನಿಗಧಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಅಂಕಗಳು ಮತ್ತು ಮೀಸಲಾತಿಯ ಅನುಸಾರ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿದ್ದು, ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/- ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಯಿರುವ ಹಿನ್ನೆಲೆಯಲ್ಲಿ 2025-26ನೇ ಸಾಲಿನಲ್ಲಿ 100 ಸಂಖ್ಯಾಬಲದ 31 ಬಾಲಕರ ಹಾಗೂ 31 ಬಾಲಕಿಯರ ಹೀಗೆ ಒಟ್ಟು 62 ಮೆಟ್ರಿಕ್ ನಂತರದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ 6200 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲಾಗಿರುತ್ತದೆ.

ಮುಂದುವರೆದು, ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಯಿದ್ದು, ಜಿಲ್ಲಾ ಕೇಂದ್ರಗಳಲ್ಲಿ ಹೊಸದಾಗಿ 100 ಸಂಖ್ಯಾಬಲದ 118 ಮೆಟ್ರಿಕ್ ನಂತರದ ಬಾಲಕರ ಹಾಗೂ 132 ಬಾಲಕಿಯರ ಒಟ್ಟು 250 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಮೆಟ್ರಿಕ್-ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ / ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳು ಈ ಕೆಳಕಂಡಂತಿವೆ.

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1750/-ಗಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಪ್ರತಿ ವಿದ್ಯಾರ್ಥಿಗೆ ರೂ.1850/- ಭೋಜನಾ ವೆಚ್ಚ ನೀಡಲಾಗುತ್ತಿರುತ್ತದೆ.

2. ಶುಚಿಸಂಭ್ರಮ ಕಿಟ್ ಸರಬರಾಜು: ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಬಾಲಕರಿಗೆ ನಿರ್ಮಲ ಕಿಟ್ ರೂ.143/-ರಂತೆ ಹಾಗೂ ಬಾಲಕಿಯರಿಗೆ ಸಿರಿಗಂಧ ಕಿಟ್ ರೂ.161/-ರಂತೆ ಈ ಕೆಳಕಂಡಂತೆ ಒದಗಿಸಲಾಗುತ್ತಿದೆ.

| **ವಿವರ** | **ಬಾಲಕರಿಗೆ (ನಿರ್ಮಲ ಕಿಟ್)** | **ಬಾಲಕಿಯರಿಗೆ (ಸಿರಿಗಂಧ ಕಿಟ್)** |
|---|---|---|
| ಮೈಸೂರು ಸ್ಯಾಂಡಲ್ ಸೋಪ್ - 125 ಗ್ರಾಂ | 1 | 1 |
| ಮೈಸೂರು ಡಿಟರ್ಜೆಂಟ್ - 150 ಗ್ರಾಂ | 2 | 2 |
| ಕೊಬ್ಬರಿ ಎಣ್ಣೆ - 100 ಗ್ರಾಂ | 1 | 1 |
| ಟಾಲ್ಕಮ್ ಪೌಡರ್ - 50 ಗ್ರಾಂ | - | 1 |
| ಟೂತ್ ಪೇಸ್ಟ್ - 100 ಗ್ರಾಂ | 1 | 1 |
| ಟೂತ್ ಬ್ರಷ್ | 1 | 1 |

3. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಪ್ರಥಮ ಬಾರಿಗೆ ರೂ.50000/- ಹಾಗೂ ನಂತರದಲ್ಲಿ ಪ್ರತಿ ವರ್ಷಕ್ಕೆ ರೂ.5000/ಗಳ ಸುಸಜ್ಜಿತ ಗ್ರಂಥಾಲಯ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ.

4. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಸುಸಜ್ಜಿತ ಗ್ರಂಥಾಲಯದ ವ್ಯವಸ್ಥೆಗಾಗಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗುತ್ತಿದೆ.

| ವಿದ್ಯಾರ್ಥಿನಿಲಯ ವಿಧ | ಪ್ರಥಮ ಬಾರಿಗೆ | ನಂತರದ ಪ್ರತಿ ವರ್ಷಕ್ಕೆ |
|---|---|---|
| ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | ರೂ.1.00 ಲಕ್ಷ | ರೂ.20,000/- |
| ಸ್ನಾತಕೋತ್ತರ / ವೃತ್ತಿಪರ ವಿದ್ಯಾರ್ಥಿ ನಿಲಯಗಳಿಗೆ | ರೂ.1.25 ಲಕ್ಷ | ರೂ.30,000/- |

5. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಈ ಕೆಳಕಂಡಂತೆ ಒದಗಿಸಲಾಗುತ್ತಿದೆ.

| ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು |
|---|
| ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ -1 |
| ರಾಜ್ಯ ಮಟ್ಟದ ಇಂಗ್ಲೀಷ್ ದಿನಪತ್ರಿಕೆ -1 |
| Wisdom – magazine -1 |

| ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು |
|---|
| Employment News-1 |
| Copetition Success Review ಅಥವಾ Wizard(Mgzine-1) |
| Mirror (Magzine)-1 |
| ರಾಜ್ಯ ಮಟ್ಟದ ಕನ್ನಡ ದಿನಪತ್ರಿಕೆ -1 |
| ರಾಜ್ಯ ಮಟ್ಟದ ಇಂಗ್ಲೀಷ್ ದಿನಪತ್ರಿಕೆ -1 |

6. ಕ್ರೀಡಾ ಸಾಮಗ್ರಿಗಳು: ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ (ಪ್ರತಿ ವರ್ಷಕ್ಕೆ, ವಾಸ್ತವ ದರದಂತೆ) ಈ ಕೆಳಕಂಡ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ.:

| ಬಾಲಕರಿಗೆ | ಬಾಲಕಿಯರಿಗೆ |
|---|---|
| ಕೇರಂ ಬೋರ್ಡ್, ಫುಟ್‌ಬಾಲ್, ಚೆಸ್, ವಾಲಿಬಾಲ್, ಕ್ರಿಕೆಟ್ ಕಿಟ್. ಶಾಟ್ ಪುಟ್ (ಅನುಪಯುಕ್ತವಾದ ನಂತರ ಮಾತ್ರ ಮರು ಖರೀದಿ) | ಕೇರಂ ಬೋರ್ಡ್, ಚೆಸ್, ಥ್ರೋಬಾಲ್, ಸ್ಕಿಪ್ಪಿಂಗ್ ರೋಪ್, ಟೆನ್ನಿಕಾಯಿಟ್ (ರಿಂಗ್) |

...4

7. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಶೌಚಾಲಯಗಳ / ಆವರಣದ ಸ್ವಚ್ಛತೆಗೆ ಪ್ರತಿ ವಿದ್ಯಾರ್ಥಿ ನಿಲಯಕ್ಕೆ (ಪ್ರತಿ ತಿಂಗಳಿಗೆ ವಾಸ್ತವ ದರದಂತೆ ಹಾಗೂ ಪಾರದರ್ಶಕ ನಿಯಮಗಳಂತೆ) ಈ ಕೆಳಕಂಡಂತೆ ವೆಚ್ಚ ಭರಿಸಲಾಗುತ್ತಿದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.1,000/- |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.1,250/- |
| 101 ರಿಂದ 150 ರವರೆಗೆ | ರೂ.1,500/- |
| 151 ಕ್ಕೂ ಮೇಲ್ಪಟ್ಟು | ರೂ.2,000/- |
| ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಲು (ವಾರ್ಷಿಕ) | ರೂ.5,000/- |

8. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ವಚ್ಛತಾ ಸಾಮಗ್ರಿಗಳಿಗಾಗಿ (ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರತಿ ತಿಂಗಳಿಗೆ) ಈ ಕೆಳಕಂಡಂತೆ ವೆಚ್ಚವನ್ನು ನೀಡಲಾಗುತ್ತಿರುತ್ತದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.500/ |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.750/ |
| 101 ರಿಂದ 150 ರವರೆಗೆ | ರೂ.1,000/ |
| 151 ಕ್ಕೂ ಮೇಲ್ಪಟ್ಟು | ರೂ.1,250/ |

9. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಕೆಟ್ಟು ಹೋದ ಉಪಕರಣಗಳ ದುರಸ್ತಿ / ಬದಲಾವಣೆಗೆ ಇಂಪ್ರೆಸ್ಟ್ ಮೊತ್ತ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ ಈ ಕೆಳಕಂಡಂತೆ ವೆಚ್ಚವನ್ನು ನೀಡಲಾಗುತ್ತಿರುತ್ತದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.3,000/- |
| 51 ರಿಂದ 100 ಸಂಖ್ಯಾಬಲದ ವರೆಗೆ | ರೂ.5,000/- |
| 101 ಕ್ಕೂ ಮೇಲ್ಪಟ್ಟು | ರೂ.7,500/- |

10. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವೈದ್ಯಕೀಯ ಸೌಲಭ್ಯ ಒದಗಿಸಲು ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ ಈ ಕೆಳಕಂಡಂತೆ ವೆಚ್ಚವನ್ನು ನೀಡಲಾಗುತ್ತಿದೆ.

| | |
|---|---|
| 50 ಸಂಖ್ಯಾಬಲದ ವರೆಗೆ | ರೂ.5,000/- |
| 51 ಕ್ಕೂ ಮೇಲ್ಪಟ್ಟು | ರೂ.10,000/- |

11. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಯೊಂದಿಗೆ ಬರುವ ಎಲ್ಲಾ ವಸ್ತುಗಳನ್ನು ನೀಡಲಾಗುತ್ತಿದೆ.

12. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಕ್ಷೌರಕ್ಕಾಗಿ ಎರಡು ತಿಂಗಳಿಗೊಮ್ಮೆ ರೂ. 60/-ರಂತೆ (ವಾರ್ಷಿಕವಾಗಿ 5 ಬಾರಿ ಮಾತ್ರ) ಒಟ್ಟು 300/-ರೂ.ಗಳನ್ನು ನೀಡಲಾಗುತ್ತಿದೆ.

13. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಪ್ರತಿ ವಿದ್ಯಾರ್ಥಿಗೆ ರೂ.400/-ರ ವೆಚ್ಚದಲ್ಲಿ ವರ್ಷಕ್ಕೆ ಲೇಖನ ಸಾಮಗ್ರಿ ನೀಡಲಾಗುತ್ತಿದೆ.

...5

14. ಪ್ರತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ನಿಲಯಾರ್ಥಿಗಳಿಗೆ ಕಠಿಣ ವಿಷಯಗಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲೀಷ ಭಾಷೆಗಳನ್ನು ಅರೆಕಾಲಿಕ ಭೋಧಕರಿಂದ ಭೋಧಿಸಲಾಗುತ್ತಿದೆ.

15. ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮತ್ತು ವೃತ್ತಿ ಮಾರ್ಗದರ್ಶನಕ್ಕೆ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗುತ್ತಿದೆ.

2025-26ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ರೂ.50.00 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ 15000 ಹಾಸಿಗೆಗಳು ಮತ್ತು 15000 ಟೂ-ಟೈಯರ್ ಕಾಟ್‌ಗಳನ್ನು ವಿದ್ಯಾರ್ಥಿಗಳಿಗೆ ಪೂರೈಕೆ ಮಾಡಲಾಗಿರುತ್ತದೆ. ಮುಂದುವರೆದು, ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾಗುವ ಅನುದಾನಕ್ಕನುಗುಣವಾಗಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

ಸಂಖ್ಯೆ: ಹಿಂವಕ 76 ಬಿಎಂಎಸ್ 2026.

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.